ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 07-03-1995.

# *ಬ್ರಾಹ್ಮಣ ಅರ್ಥಾತ್ ಧರ್ಮ ಶಕ್ತಿ ಹಾಗೂ ಸ್ವರಾಜ್ಯ ಶಕ್ತಿಯ ಅಧಿಕಾರಿ ಅತ್ಮರು*

(ब्राहमण अर्थात् धर्म सत्ता और स्वराज्य सत्ता की अधिकारी आत्मा)

ಇಂದು ಬಾಪ್‌ದಾದಾರವರು ನಾಲ್ಕೂಕಡೆಯ ಮಕ್ಕಳಲ್ಲಿ ವಿಶೇಷವಾಗಿ ಎರಡು ಶಕ್ತಿಗಳನ್ನು ನೋಡುತ್ತಿದ್ದಾರೆ. ಅವರೆಡು ಶಕ್ತಿಗಳಲ್ಲಿ ಒಂದು ಧರ್ಮ ಶಕ್ತಿ ಹಾಗೂ ಇನ್ನೊಂದು ಸ್ವರಾಜ್ಯ ಶಕ್ತಿ. ಬ್ರಾಹ್ಮಣ ಜೀವನದ ವಿಶೇಷತೆಯೇ ಇವೆರಡು ಶಕ್ತಿಗಳು. ಇವು ಪ್ರತಿಯೊಬ್ಬರಿಗೂ ಪ್ರಾಪ್ತಿಯಾಗುತ್ತದೆ ಧರ್ಮ ಶಕ್ತಿ ಎಂದರೆ ಸತ್ಯತೆ, ಪವಿತ್ರತೆಯ ಧಾರಣಾ ಸ್ವರೂಪ ಹಾಗೂ ಸ್ವರಾಜ್ಯ ಶಕ್ತಿ ಎಂದರೆ ಅಧಿಕಾರಿಯಾಗಿ ಸರ್ವ ಕರ್ಮೇಂದ್ರಿಯಗಳನ್ನು ತನ್ನ ಆದೇಶದಂತೆ ನಡೆಸುವುದು. ಯಾವುದೇ ಪರಿಸ್ಥಿತಿಯಾಗಿರಲಿ, ಪ್ರಕೃತಿ ಅಥವಾ ಮಾಯೆಯ ಸರ್ವ ಸ್ವರೂಪಗಳಲ್ಲಿ ಸ್ವರಾಜ್ಯ ಅಧಿಕಾರಿ ಅಥವಾ ಸ್ವರಾಜ್ಯ ಶಕ್ತಿಯುಳ್ಳವರು ಅಧೀನರಾಗುವುದಿಲ್ಲ. ಅಧಿಕಾರಿ ಆಗಿರುತ್ತಾರೆ. ಬಾಪ್‌ದಾದಾರವರು ಪ್ರತಿಯೊಬ್ಬ ಬ್ರಾಹ್ಮಣ ಆತ್ಮನಿಗೂ ಇವೆರಡೂ ಶಕ್ತಿಗಳನ್ನು ಪ್ರಾಪ್ತಿ ಮಾಡಿಸಿದ್ದಾರಲ್ಲವೆ? ಎಲ್ಲರಲ್ಲಿಯೂ ಇವೆರಡು ಶಕ್ತಿಗಳಿವೆಯೇ ಅಥವಾ ಈಗಲೂ ಸಂಪೂರ್ಣವಾಗಿ ಬಂದಿಲ್ಲವೇ? ಈಗ ಇವೆರಡೂ ಶಕ್ತಿಗಳನ್ನು ಪ್ರಾಪ್ತಿ ಮಾಡಿಕೊಳ್ಳುವವರೇ ಭವಿಷ್ಯದಲ್ಲಿ ಧರ್ಮ ಹಾಗೂ ರಾಜ್ಯ ಶಕ್ತಿಯ ಅಧಿಕಾರಿಯಾಗುತ್ತಾರೆ. ಇವೆರಡೂ ಶಕ್ತಿಗಳ ಧಾರಣೆಯಾಗಿದೆಯೇ? ತಮ್ಮ ಚಿತ್ರವನ್ನು ನೋಡಿದ್ದೀರಾ? ಡಬಲ್ ವಿದೇಶಿಗಳ ಚಿತ್ರವಿದೆಯೇ ಅಥವಾ ಬೇರೆ ಯಾರದಾದರೂ ಚಿತ್ರವಿದೆಯೇ? ಹಾಗಾದರೆ ಆ ಚಿತ್ರದಲ್ಲಿ ಇವೆರಡು ಶಕ್ತಿಗಳ ಚಿಹ್ನೆಯನ್ನು ನೋಡಿದ್ದೀರಾ? ಧರ್ಮಶಕ್ತಿಯ ಚಿಹ್ನೆ- ಪ್ರಕಾಶತೆಯ ಕಿರೀಟ ಹಾಗೂ ರಾಜ್ಯ ಶಕ್ತಿಯ ಚಿಹ್ನೆಯಾಗಿ ರತ್ನಗಳಿಂದ ಕೂಡಿರುವ ಕಿರೀಟ, ಹಾಗಾದರೆ ಇಂತಹ ತಮ್ಮ ಚಿತ್ರವನ್ನು ನೋಡಿದ್ದೀರಾ? ಈ ಸಮಯದಲ್ಲಿಯೇ ಇವೆರಡೂ ಶಕ್ತಿಗಳನ್ನು ಧಾರಣೆ ಮಾಡಿಕೊಳ್ಳುತ್ತೀರಿ. ತಮ್ಮ ಒಂದೇ ಕೈಯಲ್ಲಿಯೇ ಇವೆರಡೂ ಶಕ್ತಿಗಳಿರುತ್ತವೆ. ದ್ವಾಪರದಲ್ಲಿ ಧರ್ಮ ಶಕ್ತಿಯೇ ಬೇರೆಯಾಯಿತು ಹಾಗೂ ರಾಜ್ಯ ಶಕ್ತಿಯೇ ಬೇರೆಯಾಯಿತು ಆದ್ದರಿಂದ ಧರ್ಮಪಿತರು ಬರಬೇಕಾಯಿತು. ಆ ಸಮಯದಲ್ಲಿ ಧರ್ಮಪಿತ ಹಾಗೂ ರಾಜ, ಇಬ್ಬರು ಬೇರೆ-ಬೇರೆ ಇರುತ್ತಾರೆ ಆದರೆ ತಮ್ಮ ರಾಜ್ಯದಲ್ಲಿ ಇವೆರಡು ಬೇರೆ-ಬೇರೆ ಆಗಿರುತ್ತವೆಯೇ? ಪ್ರತಿಯೊಬ್ಬರ ಬಳಿ ಇವೆರಡೂ ಶಕ್ತಿಗಳು ಒಟ್ಟಿಗೆ ಇರುತ್ತವೆ ಆದ್ದರಿಂದ ಅಖಂಡ ನಿರ್ವಿಘ್ನ ರಾಜ್ಯ ನಡೆಯುತ್ತದೆ. ಹಾಗಾದರೆ ಪ್ರತಿಯೊಬ್ಬರಲ್ಲಿಯೂ ಇವೆರಡೂ ಶಕ್ತಿಗಳನ್ನು ನೋಡುತ್ತಿದ್ದರು- ಪ್ರತಿಯೊಬ್ಬರೂ ತಮ್ಮ ಧಾರಣೆಯನ್ನೆಷ್ಟು ಮಾಡಿಕೊಂಡಿದ್ದಾರೆ? ಎಲ್ಲಿಯವರೆಗೆ ಅಧಿಕಾರಿ ಆಗಿದ್ದಾರೆ? ಸದಾ ಅಧಿಕಾರಿಯಾಗಿ ಇರುತ್ತೀರಾ ಅಥವಾ ಕೆಲವೊಮ್ಮೆ ಅಧೀನ. ಕೆಲವೊಮ್ಮೆ ಅಧಿಕಾರಿಯೇ? ಈಗೀಗ ಅಧಿಕಾರಿಯಾಗಿ ಮತ್ತೆ ಈಗೀಗ ಅಧೀನರಾಗಿಬಿಟ್ಟರೆ ಚೆನ್ನಾಗಿರುತ್ತದೆಯೇ? ಅಥವಾ ಸದಾ ಅಧಿಕಾರಿಯಾಗಿರುವುದು ಚೆನ್ನಾಗಿದೆಯೇ? ಸದಾ ಅಧಿಕಾರ ಬೇಕಾ ಅಥವಾ ಸ್ವಲ್ಪ

ಸಮಯಕ್ಕಾದರೂ ನಡೆಯುವುದೇ? ಸ್ವಯಂ ತಂದೆಯವರೇ ಅಧಿಕಾರವನ್ನು ಕೊಡುತ್ತಿದ್ದಾರೆ. ಕೊಡುವವರು ಕೊಡುತ್ತಿದ್ದಾರೆ ಮತ್ತು ಯಾರು ತೆಗೆದುಕೊಳ್ಳುವವರು ಇದ್ದಾರೆಯೋ ಅವರೇನು ಮಾಡಬೇಕು? ತೆಗೆದುಕೊಳ್ಳುವುದು ಸಹಜವೇ ಅಥವಾ ಕೊಡುವುದು ಸಹಜವೇ? ತೆಗೆದುಕೊಳ್ಳುವುದರಲ್ಲಂತು ಕಷ್ಟವೇನೂ ಇಲ್ಲ ಅಲ್ಲವೇ? ಕೊಡುವುದಕ್ಕೆ ಕೊಡೋಣವೇ ಅಥವಾ ಬೇಡವೇ, ಸ್ವಲ್ಪ ಕೊಡುವುದೇ ಅಥವಾ ಹೆಚ್ಚಾಗಿ ಕೊಡುವುದೇ.... ಹೀಗೆ ಯೋಚಿಸಬೇಕಾಗುತ್ತದೆ ಆದರೆ ತೆಗೆದುಕೊಳ್ಳುವುದರಲ್ಲಂತು ಎಲ್ಲರೂ ಎಷ್ಟು ಸಿಗುತ್ತದೆಯೋ ಅಷ್ಟೂ ತೆಗೆದುಕೊಳ್ಳೋಣ ಎಂದು ಹೇಳುತ್ತಾರೆ. ಹಾಗಾದರೆ ತೆಗೆದುಕೊಳ್ಳುವುದರಲ್ಲಿ ನಂಬರ್‌ವನ್ ಆಗಿದ್ದೀರಾ ಅಥವಾ ನಂಬರ್ ಟು ಆಗಿರುವಿರಾ? ಇದರಲ್ಲಿ ಯಾರೂ ಸಹ ಎರಡನೇ ನಂಬರಿನವರಾಗುವುದಿಲ್ಲ ಮತ್ತೆ ಯಾವಾಗ ಕೊಡಬೇಕಾಗುವುದೋ ಆಗ... ಕೊಡುವುದರಲ್ಲಿಯೂ ನಂಬರ್‌ವನ್ ಆಗಿದ್ದೀರಾ ಅಥವಾ ಯೋಚನೆ ಮಾಡಬೇಕಾಗುತ್ತದೆಯೇ, ಸಾಹಸ(ಧೈರ್ಯ)ವನ್ನು ಇಡಬೇಕಾಗುತ್ತದೆ. ವಾಸ್ತವದಲ್ಲಿ ಕೊಡುವುದಾದರೂ ಏನು ಕೊಡುತ್ತೀರಿ? ಬ್ರಾಹ್ಮಣ ಜೀವನದಲ್ಲಿ ಕೊಡಬೇಕೇ ಅಥವಾ ತೆಗೆದುಕೊಳ್ಳಬೇಕೇ? ಒಂದುವೇಳೆ ಕೊಡುವಂತಹ ವಸ್ತುವಿಗಿಂತ ತೆಗೆದುಕೊಳ್ಳುವ ವಸ್ತುವೇನಾದರೂ ಶ್ರೇಷ್ಠವಾಗಿದ್ದರೆ ಅದು ತೆಗೆದುಕೊಳ್ಳುವುದಾಯಿತೇ ಅಥವಾ ಕೊಡುವುದಾಯಿತೇ? ಕೊಡಬೇಕಾಗುತ್ತದೆ. ಕೊಡಬೇಕು ಹೀಗೆ ಯೋಚಿಸಿದಾಗ ಚಿಂತಾಗ್ರಸ್ತರಾಗುತ್ತೀರಿ. ತೆಗೆದುಕೊಳ್ಳಬೇಕಾದರೆ ಸದಾ ಖುಷಿಯಾಗಿರುತ್ತೀರಿ. ಧೈರ್ಯದಿಂದ ಇರುತ್ತೀರಿ. ಕೊಡಬೇಕಾದರೆ ಕೊಡುವುದು ಕಷ್ಟವೆಂದು ಯೋಚಿಸುತ್ತೀರಿ ಆದರೆ ಮೊದಲು ತೆಗೆದುಕೊಳ್ಳುತ್ತೀರಿ ನಂತರ ಕೊಡುವುದಂತೂ ಏನೂ ಇಲ್ಲ. ತಂದೆಯವರಿಗೆ ಕೊಡುವುದಕ್ಕಾಗಿ ತಮ್ಮ ಬಳಿ ಏನಾದರೂ ಇದೆಯೇ? ಕೊಡುವುದಂತು ಒಳ್ಳೆಯ ವಸ್ತುವನ್ನು ಕೊಡಲಾಗುತ್ತದೆಯೇ ಅಥವಾ ಹಾಳಾಗಿರುವ ವಸ್ತುವನ್ನೇ? ಹಾಗಾದರೆ ತಮ್ಮ ಬಳಿ ಒಳ್ಳೆಯ ವಸ್ತುವೇನಿದೆ, ತನುವು ಚೆನ್ನಾಗಿರುವುದಿದೆಯೇ? ಮನಸ್ಸು ಒಳ್ಳೆಯದಿದೆಯೇ? ಪವಿತ್ರ ಹಣವಿದೆಯೇ? ಉಪಯೋಗಕ್ಕೆ ಬಾರದಿರುವುದೇ ಇದೆ. ಔಷಧಿಗಳ ತಳ್ಳುವಿಕೆಯಿಂದ ಶರೀರವನ್ನು ನಡೆಸುತ್ತಿದ್ದೀರಿ ಅಂದಮೇಲೆ ತಳ್ಳುವಂತಹ ವಾಹನವೇನಾದರೂ ಚೆನ್ನಾಗಿರುತ್ತದೆಯೇ! ಅದೇರೀತಿ ಬ್ರಾಹ್ಮಣ ಜೀವನದಲ್ಲಿ ಕೇವಲ ತೆಗೆದುಕೊಳ್ಳುವುದೇ ಇರುತ್ತದೆ ಮತ್ತು ತಂದೆಯವರಂತು ಮುಗುಳ್ನಗುತ್ತಾರೆ- ಏಕೆಂದರೆ ಮಕ್ಕಳು ತಂದೆಯವರಿಗಿಂತಲೂ ಚತುರರಾಗಿದ್ದಾರೆ. ಮೊದಲು ತೆಗೆದುಕೊಳ್ಳುತ್ತಾರೆ ನಂತರ ಕೊಡಲು ಯೋಚಿಸುತ್ತಾರೆ. ಬುದ್ಧಿವಂತರಲ್ಲವೆ! ಮಕ್ಕಳು ಬುದ್ಧಿವಂತರಾಗಿದ್ದಾರೆ ತಂದೆಯವರಿಗೂ ಇಷ್ಟವಾಗುತ್ತದೆ ಆದರೆ ಒಂದುವೇಳೆ ಸಾಗುತ್ತಾ, ಸಾಗುತ್ತಾ ನಿಧಾನವಾಗಿಬಿಟ್ಟರೆ ಚೆನ್ನಾಗಿರುವುದಿಲ್ಲ. ಕೆಲವೊಮ್ಮೆ ಮಕ್ಕಳ ಮುಖವು ಹೀಗಿರುತ್ತದೆಯೆಂದರೆ ಅವರಿಗೆ ಏನಾಗಿದೆ ಎಂದು ಕೂಡ ತಿಳಿಯುವುದಿಲ್ಲ. ಹೇಗೆ ಶರೀರದಲ್ಲಿ ನಡೆಯುತ್ತಾ-ನಡೆಯುತ್ತಾ ರಕ್ತ ಕಡಿಮೆಯಾಯಿತೆಂದರೆ ಬಲಹೀನರಾಗುವರಲ್ಲವೇ ಮುಖದಿಂದಲೂ ಬಲಹೀನತೆಯು ಕಂಡುಬರುತ್ತದೆ. ಅದೇರೀತಿ ಇಲ್ಲಿಯೂ ಖುಷಿ, ಶಕ್ತಿಯ ಕೊರತೆಯಾದರೆ ಮುಖವು ಹೀಗಾಗಿಬಿಡುತ್ತದೆ. ಎಲ್ಲರಿಗೂ ಗೊತ್ತಿದೆ. ಎಲ್ಲರೂ ಅನುಭವಿಯಾಗಿದ್ದಾರೆ. ಒಂದುಕಡೆ ಹೇಳುತ್ತೀರಿ··· ಖುಷಿಗಳ ಗಣಿಯೇ ಸಿಕ್ಕಿದೆ ಮತ್ತು ಅದೂ ಅವಿನಾಶಿಯಾದುದು ಸಿಕ್ಕಿದೆ, ಮತ್ತೆ ಕಡಿಮೆಯಾಗಿಬಿಡುತ್ತದೆ. ತಂದೆಯ ಬಳಿ ನಿಮ್ಮೆಲ್ಲರ ಮನಸ್ಸಿನ ಮೂಡ್ ಮತ್ತು ಆ ಮನಸ್ಸಿನ ಮೂಡನ್ನು ಅನುಸರಿಸಿ ನಿಮ್ಮ ಮುಖ ಹೇಗಿರುತ್ತದೆಯೋ ಆ ಚಿತ್ರಗಳು ಅಲ್ಲಿರುತ್ತವೆ. ಚಿತ್ರಗಳಿಂದ ಪ್ರದರ್ಶನಿ ತಯಾರು ಮಾಡುತ್ತಾರೆ ಅಲ್ಲವೇ ಹಾಗೆಯೇ ತಂದೆಯ ಹತ್ತಿರ ನಿಮ್ಮ ಚಿತ್ರಗಳ ಪ್ರದರ್ಶನಿ ಇರುತ್ತದೆ. ಆದ್ದರಿಂದ ಸದಾ ನೆನಪಿಟ್ಟುಕೊಳ್ಳಿರಿ ನಾನು ಬ್ರಾಹ್ಮಣ ಆತ್ಮನಾಗಿದ್ದೇನೆ. ರಾಜ್ಯ ಶಕ್ತಿ ಹಾಗೂ

ಧರ್ಮ ಶಕ್ತಿಯ ಅಧಿಕಾರಿ ಆತ್ಮನಾಗಿದ್ದೇನೆ. ಈ ಸ್ಮೃತಿಯ ನಿಶ್ಚಯವಿದ್ದರೆ ನಶೆಯಿರುತ್ತದೆ, ನಿಶ್ಚಯ ಕಡಿಮೆಯಾದರೆ ನಶೆಯೂ ಕಡಿಮೆಯಾಗುವುದು. ಹಾಗಾದರೆ ಈ ಶಕ್ತಿಗಳು ಸದಾ ಜೊತೆಯಿರುತ್ತದೆಯೇ ಅಥವಾ ಕೆಲವೊಮ್ಮೆ ಕಳೆದುಹೋಗುತ್ತದೆಯೇ ಅಥವಾ ಕೆಲವೊಮ್ಮೆ ಬಂದು ಬಿಡುತ್ತದೆಯೇ? ಎಂದು ಪರಿಶೀಲಿಸಿರಿ. ಒಳ್ಳೆಯದು.

ಇಂದು ಡಬಲ್ ವಿದೇಶಿಯರು ಮೆಜಾರಿಟಿ ಇದ್ದಾರೆ. ಬಾಪ್‌ದಾದಾರವರು ವಿಶೇಷವಾಗಿ ಡಬಲ್ ವಿದೇಶಿಯರನ್ನು ಕೇಳುತ್ತಿದ್ದಾರೆ-ಇಡೀ ದಿನದಲ್ಲಿ ತಮ್ಮ ಅಧಿಕಾರದ ಸೀಟಿನ ಮೇಲೆ ಸೆಟ್ ಆಗಿ ಇರುತ್ತೀರಾ ಅಥವಾ ಬಹಳ ಬೇಗನೆ ಅಪ್ಸೆಟ್ ಆಗುತ್ತೀರಾ? ಏನಾಗುತ್ತಿದೆ? ಸೆಟ್ ಆಗುತ್ತಿದ್ದೀರಾ? ಅಪ್ಸೆಟ್ ಆಗುತ್ತಿದ್ದೀರಾ? ಆಗುತ್ತಿಲ್ಲ ಎಂದು ಹೇಳಿರಿ. ಹೌದೋ, ಇಲ್ಲವೋ? ಆಗುತ್ತಿದ್ದೀರಾ ಅಪ್ಸೆಟ್? ಅಥವಾ ಅದು ಪೂರ್ವದ ವಿಷಯ, ಈಗಿನದಲ್ಲ ವಲ್ಲವೇ? ಆ ವಿಷಯ ಗತಿಸಿ ಹೋಗಿದೆಯಲ್ಲವೇ! ಈಗ ಆಗುತ್ತಿಲ್ಲವಲ್ಲವೇ ಏಕೆಂದರೆ ಈಗ ಜ್ಞಾನ ಸಾಗರರು ಮತ್ತು ಶಕ್ತಿಶಾಲಿಯಾಗಿ ಬಿಟ್ಟಿದ್ದೀರಿ. ಚಿಕ್ಕದಾದ ಮಾತಿನಲ್ಲಿ ಅಪ್‌ಸೆಟ್ ಆಗಿ, ಮುಖವೇ ಬದಲಾಗಿಬಿಡುತ್ತದೆ. ಮೂಡ್ ಬದಲಾಗಿಬಿಡುವಂತೆ ಆಗಬಾರದು. ಈ ರೀತಿ ಯಾವಾಗಲಾದರೂ ಆಗುವುದೇ? ಕೆಲವೊಮ್ಮೆಗಾದರೂ ಅಪ್‌ಸೆಟ್ ಆಗುವಿರಾ? ಹೌದು ಎನ್ನುತ್ತಿದ್ದೀರಿ. ಪಾಂಡವರು ಕೂಡ ಹೌದು ಎನ್ನುತ್ತಿದ್ದಾರೆ. ಒಳ್ಳೆಯದು! ಅಪ್ಸೆಟ್ ಆಗುವುದೆಂದರೆ ಏನು ಎಂಬುದನ್ನೂ ಮರೆತುಹೋಗಿದ್ದೇನೆ ಎನ್ನುವವರು ಕೈಯನ್ನುತ್ತಿರಿ. ಸತ್ಯ(ನಿಜ) ಹೇಳುತ್ತಿದ್ದೀರಿ. ಶುಭಾಶಯಗಳು, ಈಗ  ಈ ಸೀಜನ್ನಿನಲ್ಲಿ ಮಧುಬನದಲ್ಲಿ ಯಾವುದಾದರೂ ಒಂದನ್ನು ಬಿಟ್ಟು ಮತ್ಯಾವುದನ್ನಾದರೂ ತೆಗೆದುಕೊಂಡು ಹೋಗುವಿರಾ? ಮೆಜಾರಿಟಿಯಲ್ಲಿ ಮಧುಬನದಲ್ಲಿ ಶಿವರಾತ್ರಿಯನ್ನು ಆಚರಿಸಿದ್ದಾರಲ್ಲವೆ ಅಂದಾಗ ಯಾರ ಜಯಂತಿಯಾಗುವುದೋ ಅವರಿಗೆ ಕೊಡುಗೆಯನ್ನು ಕೊಡುವರಲ್ಲವೆ. ಹಾಗಾದರೆ ತಂದೆಯವರಿಗೆ ಯಾವ ಕೊಡುಗೆಯನ್ನು ಕೊಡುವಿರಿ? ಈ ಅಪ್‌ಸೆಟ್ ಆಗುವ ಗಿಫ್ಟ್‌ಅನ್ನೇ ಕೊಟ್ಟುಬಿಡಿ, ಆಗುವುದಿಲ್ಲವೇ. ಧೈರ್ಯವಿದೆಯೇ? ಒಳ್ಳೆಯದು ಕೈ ಮೇಲೆತ್ತಿರಿ ಮತ್ತು ಟಿ.ವಿ.ಯಲ್ಲಿ ಎಲ್ಲರ ಕೈಯನ್ನು ರೆಕಾರ್ಡ್ ಮಾಡಿಕೊಳ್ಳಿರಿ. ಚಿಂತನೆ ಮಾಡಿ ತಿಳಿದುಕೊಂಡು ಪರಿಪಕ್ವವಾದ ಮೇಲೆ ಕೈ ಎತ್ತಿರಿ. ಎಲ್ಲರ ಕೈಗಳ ಭಾವಚಿತ್ರವನ್ನಂತು ತೆಗೆದುಕೊಳ್ಳಲಾಯಿತು. ಬಾಪ್‌ದಾದಾರವರಿಗೆ ಆ ಮುಖವು ಇಷ್ಟವಾಗುವುದಿಲ್ಲ. ಬಾಪ್‌ದಾದಾರವರಿಗೆ ಪ್ರತಿಯೊಂದು ಮಕ್ಕಳಲ್ಲಿ ಸದಾ ಅರಳಿರುವ ಆತ್ಮಿಕ ಗುಲಾಬಿಯನ್ನು ನೋಡಲು ಬಯಸುತ್ತಾರೆ. ಮುದುಡಿಕೊಂಡಿರುವುದಲ್ಲ, ಅರಳಿರುವ ಗುಲಾಬಿ, ಯಾರೊಂದಿಗೆ ಪ್ರೀತಿಯಿರುತ್ತದೆಯೋ ಅವರಿಗೇನು ಇಷ್ಟವೋ ಅದನ್ನೇ ಮಾಡಲಾಗುತ್ತದೆ. ಡಬಲ್ ವಿದೇಶಿಗಳಿಗಂತು ತಂದೆಯವರನ್ನು ಬಹಳ ಪ್ರೀತಿ ಮಾಡುತ್ತಾರೆ. ಹಾಗಾದರೆ ತಂದೆಗೆ ಏನು ಇಷ್ಟವಾಗುವುದೋ ಅದು ತಮಗೂ ಇಷ್ಟವಾಗುತ್ತದೆಯಲ್ಲವೆ! ಇನ್ನು ಮುಂದೆ ಏನು ಮಾಡಲಿ, ಮಾತೇ ಹಾಗಿತ್ತಲ್ಲವೆ ಆದ್ದರಿಂದ ಅಪ್‌ಸೆಟ್ ಆಗಿಬಿಟ್ಟೆವು ಎನ್ನುವಂತಹ ಸಮಾಚಾರ ಬರಬಾರದು. ಒಂದುವೇಳೆ ಮಾತು ಅಪ್‌ಸೆಟ್ ಮಾಡುವಂತದ್ದೇ ಬರಲಿ ಆದರೆ ತಾವು ಅಪ್‌ಸೆಟ್ ಸ್ಥಿತಿಯಲ್ಲಿ ಬರಬಾರದು. ಹೇಗೆ ಉಯ್ಯಾಲೆಯಲ್ಲಿ ತೂಗಾಡುತ್ತೀರಲ್ಲವೆ. ಅದಂತು ಬಹಳ ಮೇಲೆ. ಬಹಳ ಕೆಳಗೆ ಹೋಗುತ್ತದೆ ಮತ್ತು ಬಹಳ ವೇಗವಾಗಿಯೂ ಇರುತ್ತದೆ, ಆ ಸಮಯದಲ್ಲಿ ಶರೀರವನ್ನು ಅಪ್‌ಸೆಟ್ ಮಾಡುತ್ತದೆ. ಆಗ ತಾವು ಅಪ್‌ಸೆಟ್ ಆಗುವಿರೇನು? ಏಕಾಗುವುದಿಲ್ಲ? ಆಟವೆಂದು ತಿಳಿಯುತ್ತೀರಿ ಆದ್ದರಿಂದ ಅಪ್‌ಸೆಟ್ ಆಗುವುದಕ್ಕೆ ಬದಲು ಮನೋರಂಜನೆಯೆಂದು ತಿಳಿಯುತ್ತೀರಿ. ಕಾರಣವೇನಾಯಿತು? ಆಟವಾಗಿದೆ. ಅಂತಹ ಯಾವುದೇ ಅಪ್‌ಸೆಟ್ ಆಗುವ ಮಾತುಗಳು ಬಂದರೂ ಸಹ, ಅವಶ್ಯವಾಗಿ

ಬಂದೇ ಬರುತ್ತದೆ. ಯಾರು ಕೈ ಮೇಲೆತ್ತಿದ್ದೀರಿ ಅವರ ಬಳಿ ಇನ್ನೂ ಅಪ್‌ಸೆಟ್ ಮಾಡುವಂತಹ ಮಾತುಗಳು ಬರುತ್ತವೆ ಏಕೆಂದರೆ ಮಾಯೆಯೂ ಸಹ ಮುರಳಿಯನ್ನು ಕೇಳಿಸಿಕೊಳ್ಳುತ್ತಿದೆ. ಆದರೆ ಅದನ್ನು ಒಂದು ಆಟವೆಂದು ತಿಳಿಯಿರಿ, ಗಾಬರಿಯಾಗಬಾರದು. ತೂಗುತ್ತಿರುತ್ತದೆ ತೂಗಲು ಬಿಡಿ ಆದರೆ ಮನಸ್ಸು ಗಾಬರಿಯಾಗಬಾರದು. ಜ್ಞಾನಪೂರ್ಣ, ಶಕ್ತಿಪೂರ್ಣರಾಗಿರಿ. ಈ ಸ್ಥಾನವನ್ನು ಬಿಡಬಾರದು. ಒಂದೆರಡು ಬಾರಿ ಮಾಯೆಯು ಸಹ ನೋಡುತ್ತದೆ. ಇವರು ಅಪ್‌ಸೆಟ್ ಆಗುವವರಲ್ಲವೆಂದರೆ ತಾನೇ ಅಪ್‌ಸೆಟ್ ಆಗಿ ಬಿಡುತ್ತದೆ. ನಿಮ್ಮನ್ನು ಮಾಡುವುದಿಲ್ಲ. ಭಲೇ ವಿಷಯಗಳನ್ನು ಹಂಚಿಕೊಳ್ಳಿ. ಯಾವುದೇ ವಿಷಯ ಬಂದರೆ ಜ್ಞಾನ ಸಾಗರರಾದ ಕಾರಣ ಹೀಗೆ ತಿಳಿದುಕೊಳ್ಳುತ್ತೀರಲ್ಲವೇ - ಇದು ಸರಿಯಾದದು, ಇದು ಸರಿಯಾದದು ಅಲ್ಲ, ಇದು ಹೀಗಾಗಬೇಕು, ಇದು ಹೀಗಾಗಬಾರದು... ಹೀಗೆ ವಿಷಯಗಳನ್ನು ಕೊಡು ತೆಗೆದುಕೊಳ್ಳಿರಿ ಆದರೆ ಅಪ್ಸೆಟ್ ರೂಪದಲ್ಲಿ ಅಲ್ಲ. ಒಂದು ಕಡೆ ಮಾತನಾಡುತ್ತಲೂ ಇರುತ್ತೀರಿ ಮತ್ತೊಂದು ಕಡೆ ಗಂಗಾ ಯಮುನಗಳು (ಕಣ್ಣೀರು) ಪ್ರವಹಿಸುತ್ತಾ ಇರುತ್ತದೆ. ಮನಸ್ಸಿನಿಂದ ಅಳುವುದು ಮತ್ತು ಕಣ್ಣಿಂದ ಅಳುವುದು ಎರಡೂ ಕೂಡ ಒಳ್ಳೆಯದಲ್ಲ.  ಹಾಗಾದರೆ ಈ ಗಿಫ್ಟ್ ಕೊಡುವುದಕ್ಕಾಗಿ ತಯಾರಿದ್ದೀರಾ? ಸಾಮಾನ್ಯ ವಾಗಿ ಹೌದು ಎಂದುಬಿಟ್ಟಿದ್ದೀರಾ ಅಥವಾ ಯೋಚಿಸಿ ಹೌದು ಎಂದಿದ್ದೀರಾ?

ಬಾಪ್‌ದಾದಾ ಬಹಳ ಸಹಜವಾದ ಯುಕ್ತಿಯನ್ನು ಹೇಳುತ್ತಿದ್ದಾರೆ. ಯಾವುದಾದರೂ ಪರಿಸ್ಥಿತಿ ಅಥವಾ ಪ್ರಕೃತಿ ಏರುಪೇರಿನ ರೂಪದಲ್ಲಿ ಬಂದರೂ ಎರಡು ವಿಷಯಗಳನ್ನು ನೆನಪಿಟ್ಟುಕೊಳ್ಳಿರಿ. ನಾಟ್ ಮತ್ತು ಡಾಟ್, ಇದಂತೂ ಸಹಜವೇ ತಾನೇ ಮರೆತು ಹೋಗುವುದಿಲ್ಲವಲ್ಲ. ಯಾವುದಾದರೂ ವಿಷಯ ತಪ್ಪಾದರೆ ಅದನ್ನು ನಾಟ್ ಮಾಡಿರಿ ಅರ್ಥಾತ್ ಮಾಡಬೇಡಿರಿ. ಯೋಚಿಸಬಾರದು, ಮಾಡಬಾರದು, ಮಾತನಾಡಬಾರದು ಮತ್ತು ಡಾಟ್ ಅರ್ಥಾತ್ ಬಿಂದುವನ್ನು ಇಟ್ಟುಬಿಡಿ ಆಗ ನಾಟ್ ಆಗಿಬಿಡುತ್ತದೆ ಅದನ್ನು ಯೋಚಿಸಬೇಡಿ ಬಿಂದು ಇಟ್ಟುಬಿಡಿ. ಅಷ್ಟೇ ಅದು ಸಮಾಪ್ತಿಯಾಗಿ ಬಿಡುತ್ತದೆ. ಆದರೆ ಬಿಂದು ಇಡುವುದು ಬರುತ್ತಿಲ್ಲ, ಯೋಚಿಸಬೇಡಿ ಬಿಂದುವು ಇಟ್ಟುಬಿಡಿ ಅಷ್ಟೇ. ಬಿಂದು ಇಡುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ?  ಕ್ಷಣಕ್ಕಿಂತಲೂ ಕಡಿಮೆ ಸಮಯ ಹಿಡಿಸುತ್ತದೆ ಆದರೆ ಏನಾಗುತ್ತದೆ?  ಇದನ್ನು ಮಾಡಬಾರದು, ಸರಿಯಾದದ್ದಲ್ಲ ಎಂದು ಯೋಚಿಸುತ್ತಿದ್ದಾರೆ ಆದರೆ ಬಿಂದುವನ್ನು ಇಡಲು ಬರುತ್ತಿಲ್ಲ. ಜ್ಞಾನ ಸಾಗರರಂತೂ ಆಗಿಬಿಟ್ಟಿದ್ದೀರಿ ಆದರೆ ಜ್ಞಾನದೊಂದಿಗೆ ಈಗ ಶಕ್ತಿಶಾಲಿಯಾಗಿ ಕೂಡ ಆಗಬೇಕು. ಆ ಶಕ್ತಿಶಾಲಿ ಸ್ಥಿತಿಯ ಲೋಪವಿದೆ ಆದ್ದರಿಂದಲೇ ಬಿಂದುವನ್ನು ಇಡಲು ಆಗುತ್ತಿಲ್ಲ. ಬಿಂದು ಇಡುವುದು ಯಾರಿಗೆ ಬರುತ್ತದೆಯೋ ಅವರು ತಂದೆಯನ್ನು ಕೂಡ ಮರೆತು ಹೋಗುವುದಿಲ್ಲ ಏಕೆಂದರೆ ತಂದೆ ಕೂಡ ಬಿಂದುವಾಗಿದ್ದಾರೆ. ನೀವು ಕೂಡ ಬಿಂದುವಾಗಿದ್ದೀರಿ. ಆಗ ಎಲ್ಲವೂ ನೆನಪಿಗೆ ಬಂದುಬಿಡುತ್ತವೆ. ಬಿಂದುವನ್ನು ಇಡಿ, ಪ್ರಶ್ನಾರ್ಥಕ, ಆಶ್ಚರ್ಯಾರ್ಥಕ, ಅಲ್ಪವಿರಾಮ ಇಡಬೇಡಿರಿ. ಬಿಂದುವನ್ನು ಇಡಿ. ಬಿಂದು ಇಡುವುದು ಸಹಜವಲ್ಲವೇ! ಉಳಿದ ಚಿಹ್ನೆಗಳನ್ನು ಇಡುವುದು ಕಷ್ಟ.  ಹಾಗೆಯೇ ಎಲ್ಲದಕ್ಕಿಂತಲೂ ಕಷ್ಟವಾದ ಚಿಹ್ನೆಯು ಪ್ರಶ್ನಾರ್ಥಕ ಚಿಹ್ನೆಯಾಗಿದೆ. ಅದನ್ನಿಡುವುದಕ್ಕೆ ಬಹಳ ಬೇಗನೆ ಬರುತ್ತದೆ ವೈ(ಏಕೆ) ಶಬ್ದ ಬಂದಾಗ ಏನು ಮಾಡಬೇಕೆಂದು ತಿಳಿಸಿದ್ದೇವಲ್ಲವೆ? ಫ್ಲೈ(ಹಾರುವುದು) ಮೇಲೆ ಹಾರಿಬಿಡಿ ಹಾರುವುದಕ್ಕೆ ಬರುತ್ತದೆಯೇ?

ಅದೇರೀತಿ ಡಬಲ್ ವಿದೇಶಿಗಳಲ್ಲಿ ಒಳೊಳ್ಳೆಯ ರತ್ನಗಳೂ ಬಂದಿದ್ದಾರೆ. ಬಾಪ್‌ದಾದಾರವರು ಇಂತಹ ರತ್ನಗಳನ್ನು ನೋಡುತ್ತಾ ಸ್ವಲ್ಪ ಕಪ್ಪು ಮಚ್ಚೆಯಿದ್ದರೂ ಅಮೂಲ್ಯ ರತ್ನವೂ ಸಹ ಪ್ರಿಯವಾಗುವುದಿಲ್ಲ ಭಲೆ ಚಿಕ್ಕದಾದ ಕಪ್ಪು ಮಚ್ಚೆಯೇ ಆಗಿರಬಹುದು ಆದರೆ ಕಪ್ಪು ಮಚ್ಚೆ ಎಂದೇ ಹೇಳುತ್ತಾರಲ್ಲವೆ. ಅಮೂಲ್ಯರತ್ನಗಳು ಎಂದಾಗ ಚಿಕ್ಕದಾದ ಈ ಕಪ್ಪು ಮಚ್ಚೆಯನ್ನೇಕೆ ಉಳಿಸಿಕೊಳ್ಳುತ್ತಿದ್ದೀರಿ, ಇಷ್ಟವಾಗುತ್ತಿದೆಯಾ? ಚಂದ್ರನಲ್ಲಿಯೂ ಕಪ್ಪಾಗಿ ಕಾಣಿಸುತ್ತದೆ ಆದ್ದರಿಂದ ಇಷ್ಟವಾಗುತ್ತದೆ ಎಂದು ಹೇಳಬಾರದು, ಡಬಲ್ ವಿದೇಶಿಯರು ಉದಾಹರಣಾ ಮೂರ್ತಿಯಾಗಿ ತೋರಿಸಿರಿ, ಅದರಲ್ಲಿ ಸ್ವಲ್ಪವೂ ಕೊರತೆಯಿರಬಾರದು. ಹಾಗೆಯೇ ಈ ಕಪ್ಪು ಮಚ್ಚೆಯಾಗಲು ಕಾರಣವೇನು? ಆದಾಗಲು ಬಯಸುವುದಿಲ್ಲ ಆದರೆ ಆಗಿಬಿಡುತ್ತದೆ ಏಕಾಗುತ್ತದೆ? ಮೂಲ ಕಾರಣವನ್ನು ತಿಳಿದಿದ್ದೀರಾ? ತಿಳಿಯುವುದರಲ್ಲಂತು ಬುದ್ಧಿವಂತರಿದ್ದೀರಿ. ಅದನ್ನು ತಿಳಿದುಕೊಂಡಿದ್ದೀರಿ ಮತ್ತೆ ಯಾವಾಗ ವರ್ಕ್‌ಶಾಪ್ ಮಾಡುತ್ತೀರೋ ಆಗ ಬಾಪ್‌ದಾದಾರವರೂ ಸಹ ವರ್ಕ್‌ಶಾಪಿನ ಭಾವಚಿತ್ರವನ್ನು ನೋಡುತ್ತಾರೆ. ಬಹಳಷ್ಟು ಕಾರಣಗಳನ್ನೂ ತೆಗೆಯುತ್ತೀರಿ. ಬಹಳ ಒಳ್ಳೊಳ್ಳೆಯ ಮಾತುಗಳನ್ನು ವರ್ಕ್‌ಶಾಪಿನಲ್ಲಿ ತೆಗೆಯುತ್ತೀರಿ ಆದರೆ ಕಾರ್ಯದಲ್ಲಿ ತರುವುದಿಲ್ಲ. ದೇಹಾಭಿಮಾನದ ಬಹಳ ಸೂಕ್ಷ್ಮ ರೂಪವು ತಯಾರಾಗುತ್ತಾ ಹೋಗುತ್ತದೆ, ಈಗ ದೊಡ್ಡ-ದೊಡ್ಡ ರೂಪದ ದೇಹಾಭಿಮಾನವೇನೂ ಇಲ್ಲ ಆದರೆ ಸೂಕ್ಷ್ಮ ಹಾಗೂ ರಾಯಲ್ ರೂಪದಲ್ಲಿ ಬರುತ್ತದೆ. ಬುದ್ಧಿಯನ್ನು ಬಹಳ ಚೆನ್ನಾಗಿಯೇ ಉಪಯೋಗಿಸುತ್ತೀರಿ. ಒಳೊಳ್ಳೆಯ ಮಾತುಗಳನ್ನು ಯೋಚಿಸುವಾಗ ಬಾಪ್‌ದಾದಾರವರು ಖುಷಿಯಾಗುತ್ತಾರೆ ಆದರೆ ಒಳ್ಳೆಯ ಮಾತುಗಳ ಬಗ್ಗೆ ಚಿಂತನೆ ಮಾಡುತ್ತಾ-ಕಾರ್ಯದಲ್ಲಿ ತರುತ್ತಾ, ಮತ್ತೇನಾದರೂ ಸ್ವಲ್ಪ ಸೇರ್ಪಡೆ ಅಥವಾ ತಿದ್ದುಪಡಿ ಮಾಡುವಾಗ ನಾನು ಎಂಬುದು ಬಂದುಬಿಡುತ್ತದೆ. ಹೇಗಾದರೆ ಖುಷಿಯಾಗಿ ತಮ್ಮ ವಿಚಾರವನ್ನು ಇಡುತ್ತೀರೋ ಹಾಗೆಯೇ ಅನ್ಯರ ವಿಚಾರವನ್ನೂ ಖುಷಿಯಾಗಿ ತೆಗೆದುಕೊಳ್ಳಿರಿ, ಇದು ಹೇಗೆ ಆಗುತ್ತದೆ. ಇದೇಕೆ ಮಾಡಿದರು. ಇದಾಗಲು ಸಾಧ್ಯವಿಲ್ಲ. ಇದಂತು ನಡೆಯಲು ಸಾಧ್ಯವಿಲ್ಲ. ಈ ರೀತಿ ಗಾಬರಿಯಾಗಬಾರದು ಅನ್ಯರ ಸಲಹೆ, ಅನ್ಯರ ಮಾತಿಗೂ ಸಹ ತಮ್ಮ ಮಾತಿಗೆಷ್ಟು ಗೌರವ ಕೊಡುತ್ತೀರೋ ಅಷ್ಟೇ ಅನ್ಯರ ವಿಚಾರದಲ್ಲಿಯೂ ಗೌರವ ಕೊಡಬೇಕು. ವಿಚಾರ ಕೊಡುವುದು ಬೇರೆ ಮಾತು. ತಮಗೆ ಅವರ ವಿಚಾರವೇನಾದರೂ ಸರಿಯೆನಿಸಲಿಲ್ಲ. ಅದರ ಪ್ರಭಾವದಲ್ಲಿ ಬರುವುದು. ಸ್ಥಿತಿಯು ಏರುಪೇರಾಗಿಬಿಡುತ್ತದೆ ಎಂದರೆ ಸೇವೆ ಸೇವೆಯಾಗುವುದಿಲ್ಲ. ಹೊಂದಿಕೊಳ್ಳುವುದು. ಅನ್ಯರ ವಿಚಾರವನ್ನೂ ತಮ್ಮ ವಿಚಾರಗಳಂತೆಯೇ ಚಿಂತನೆ ಮಾಡಿ-ತಿಳಿದುಕೊಳ್ಳುವುದೇ ಅನ್ಯರ ವಿಚಾರಗಳಿಗೆ ಗೌರವ ಕೊಡುವುದಾಗಿದೆ. ನಾನು ಇದನ್ನು ಯೋಚಿಸಿದ್ದೇನೆ ಅಥವಾ ವಿಚಾರ ಬಂದಿದೆ, ಕಾರ್ಯ ಮಾಡಿದೆನು, ಆದ್ದರಿಂದ ನನ್ನ ವಿಚಾರಗಳಿಗೆ ಮಹತ್ವವಿರಬೇಕು, ಅನ್ಯರು ಗೌರವ ಕೊಡಬೇಕು ಎಂದು ಯೋಚಿಸುತ್ತಿರಲ್ಲವೇ, ಇದೇರೀತಿ ಅನ್ಯರ ವಿಚಾರಗಳನ್ನೂ ತಮ್ಮ ವಿಚಾರಗಳಂತೆ ಬೆರೆಸಿಕೊಂಡು ಹೋಗಲು ಬರುತ್ತಿಲ್ಲ. ಅನ್ಯರ ವಿಚಾರಗಳನ್ನು ಅನ್ಯರದೆಂದು ತಿಳಿಯುತ್ತೀರಿ ಏಕೆಂದರೆ ಈಗ ತಾವು ಡಬಲ್ ವಿದೇಶಿಗಳೂ ಸಹ ಸೇವಾಕ್ಷೇತ್ರದಲ್ಲಿ ಯೋಜನೆ ಮಾಡುವುದರಲ್ಲಿ ಬಹಳ ಉನ್ನತಿಯನ್ನು ಪಡೆಯುತ್ತಿದ್ದೀರಿ ಹಾಗೂ ಮುಂದೆಯೂ ಆಗಬೇಕು. ಆದರೆ ಹೊಂದಿಕೊಳ್ಳುವ ವಿಶೇಷತೆಯನ್ನು ಉಪಯೋಗ ಮಾಡಿರಿ. ಒಂದುವೇಳೆ ಯಾವುದೇ ಮಗು ವೃದ್ಧಿಯಾಗುತ್ತದೆ ಎಂದರೆ ಬಾಪ್‌ದಾದಾರವರಿಗೆ ಖುಷಿಯಾಗುತ್ತದೆ. ಇವರೇಕೆ ವೃದ್ಧಿಯಾಗುತ್ತಿದ್ದಾರೆ ಎಂದು ತಿಳಿಯುವುದಿಲ್ಲ ಯಾರು ವೃದ್ಧಿಯಾಗುತ್ತಾರೆಯೋ ಅದು ಬಹಳ ಒಳ್ಳೆಯದು. ಅಂದಮೇಲೆ ಡಬಲ್ ವಿದೇಶಿಯರ ಬಗ್ಗೆ ಬಾಪ್‌ದಾದಾರವರಿಗಂತು

ಸ್ನೇಹವಿದ್ದೇ ಇರುತ್ತದೆ ಆದರೆ ಸೇವೆಯ ಯೋಜನೆ ಹಾಗೂ ಪ್ರತ್ಯಕ್ಷತೆಯ ಸೇವೆಗಾಗಿ ಮಾಡುತ್ತೀರಿ, ಮಾಡುತ್ತಿದ್ದೀರಿ. ಅದಕ್ಕಾಗಿ ಬಹಳ-ಬಹಳ ಗೌರವವಿದೆ.

ಬಾಪ್‌ದಾದಾರವರು ಈ ಮೊದಲೂ ತಿಳಿಸಿದ್ದಾರೆ- ಒಂದುವೇಳೆ ತಾವು ಡಬಲ್ ವಿದೇಶಿಯರಾಗಿರದಿದ್ದರೆ ತಂದೆಯ ಒಂದು ಬಿರುದು ಮಾತ್ರ ಪ್ರತ್ಯಕ್ಷದಲ್ಲಿ ಸಿದ್ಧವಾಗುತ್ತಿರಲಿಲ್ಲ. ಅದು ಯಾವುದು? ವಿಶ್ವ ಕಲ್ಯಾಣಕಾರಿ ಹಾಗಾದರೆ ಈಗ ನೋಡಿ- ವಿಶ್ವದ ನಾಲ್ಕೂ ಕಡೆಗಳಲ್ಲಿಯೂ ತಂದೆಯ ಸಂದೇಶವನ್ನು ಕೊಡುತ್ತಿದ್ದೀರಲ್ಲವೆ. ಈ ಸೀಜನ್ನಿನಲ್ಲಿ ನಾಲ್ಕೂಕಡೆಗಳಿಂದ ಬಂದಿದ್ದಾರೆ. ಒಟ್ಟು ಎಷ್ಟು ದೇಶಗಳಿಂದ ಬಂದಿದ್ದಾರೆ? (58) ಬಾಕಿ ಇನ್ನೆಷ್ಟು ದೇಶಗಳು ಉಳಿದುಕೊಂಡಿವೆ? (125) ಚಿಕ್ಕಪುಟ್ಟ ದೇಶಗಳು ಬಹಳಷ್ಟಿವೆ. ಆದರೆ ಮುಖ್ಯವಾದ ದೇಶಗಳಲ್ಲಿ 125 ಉಳಿದುಕೊಂಡಿವೆ. ಹಾಗಾದರೆ ಈಗ ಡಬಲ್ ವಿದೇಶಿಗಳಂತು ಬಹಳ ಕಾರ್ಯವನ್ನು ಮಾಡಬೇಕಾಗುತ್ತದೆ. ಭಾರತದಲ್ಲಿಯೂ ಮಾಡಬೇಕು. ವಿದೇಶದಲ್ಲಿಯೂ ಮಾಡಬೇಕಾಗಿದೆ. ಎರಡು ಸ್ಥಾನಗಳಲ್ಲಿಯೂ ಮಾಡಬೇಕಾಗಿದೆ. ಬಾಪ್‌ದಾದಾರವರು ಈ ಮೊದಲೇ ಹೇಳಿದರು- ಸೇವೆಯ ಸಂಪೂರ್ಣ ಸಫಲತೆಯ ಚಿಹ್ನೆಯಾಗಿದೆ- ಯಾವುದೇ ಮೂಲೆಯಲ್ಲಿರುವ ಆತ್ಮರಿಂದ- ನಮ್ಮಕಡೆ ಸಂದೇಶವೇ ತಲುಪಲಿಲ್ಲ ಎಂಬ ದೂರಗಳು ಬರಬಾರದು. ಸಂದೇಶವನ್ನು ತಲುಪಿಸಿದಿರಿ ಮತ್ತು ಕೇಳಿಸಿಕೊಂಡಿದ್ದರೂ ತನ್ನ ಭಾಗ್ಯವನ್ನು ರೂಪಿಸಿಕೊಳ್ಳದಿದ್ದರೆ ಅದು ತಮ್ಮ ಮೇಲಿನ ದೂರುಗಳಾಗಲಿಲ್ಲ, ಅದು ಆ ಆತ್ಮನದಾಯಿತು ಆದರೆ ತಮ್ಮ ಬಗ್ಗೆ ಯಾವುದೇ ದೂರುಗಳು ಇರಬಾರದು. ಯಾವಾಗ ಮಾಸ್ಟರ್ ವಿಶ್ವ ಕಲ್ಯಾಣಕಾರಿ ಎಂದರೆ ವಿಶ್ವದ ನಾಲ್ಕೂಕಡೆಗಳಲ್ಲಿ ಸಂದೇಶವಂತು ತಲುಪಬೇಕು. ಭಾರತದಲ್ಲಿಯೂ ತಲುಪಬೇಕು, ವಿದೇಶದಲ್ಲಿಯೂ ತಲುಪಬೇಕು. ತಮ್ಮ ವಿಜಯದ ಧ್ವಜಾರೋಹ ಆಗುತ್ತಿರುವ ಸಮಯಕ್ಕೆ ಯಾವುದೇ ಆತ್ಮನು ಬಂದು ದೂರನ್ನು ಕೊಟ್ಟರೆ ಚೆನ್ನಾಗಿರುತ್ತದೆಯೇ? ಒಂದುಕಡೆ ತಾವು ಧ್ವಜಾರೋಹಣ ಮಾಡುತ್ತಿದ್ದೀರಿ ಮತ್ತು ಇನ್ನೊಂದು ಕಡೆ ಜನರು ದೂರುಗಳನ್ನು ಕೊಡುತ್ತಿದ್ದರೆ ಚೆನ್ನಾಗಿ ಕಾಣಿಸುವುದೇ? ಇಲ್ಲ ಅಲ್ಲವೆ! ಡಬಲ್ ವಿದೇಶಿಗಳಲ್ಲಿ ಒಳ್ಳೆಯ ಸಾಹಸವಿದೆ, ತಂದೆಯೊಂದಿಗೆ ಪ್ರೀತಿಯಂತೂ ಇದ್ದೇ ಇದೆ. ಆದರೆ ಸೇವೆಯೊಂದಿಗೂ ಬಹಳ ಪ್ರೀತಿಯಿದೆ. ಎರಡರೊಂದಿಗಿನ ಪ್ರೀತಿಯ ಸರ್ಟಿಫಿಕೇಟ್ ಚೆನ್ನಾಗಿದೆ. ಈಗ ಯಾವ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು? ಎಷ್ಟು ಸೇವಾಧಾರಿಯೋ ಅಷ್ಟೇ ಶಕ್ತಿಯುಳ್ಳವರು. ಹಾಗಾದರೆ ಶಕ್ತಿಸ್ವರೂಪರೂ ಆಗಿದ್ದೀರಿ ಎಂಬ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿದೆ. ಬಾಪ್‌ದಾದಾರವರು ನೋಡುತ್ತಾರೆ- ಮೆಜಾರಿಟಿಯಲ್ಲಿ ತಂದೆಯೊಂದಿಗೆ ಹಾಗೂ ಸೇವೆಯೊಂದಿಗಿನ ಪ್ರೀತಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಈಗ ಈ ಸೀಸನ್ ನಲ್ಲಿ ಮೊದಲ ಬಾರಿ ಬಂದಿರುವವರು ಕೈಯನ್ನೆತ್ತಿರಿ. ಎಷ್ಟು ಜನ ಬಂದಿದ್ದೀರಿ 600 ಜನ ಮೊದಲ ಬಾರಿ ಬಂದಿದ್ದೀರಿ. ನೀವು ಬಹಳ ಅದೃಷ್ಟವಂತರು ಏಕೆಂದರೆ ನಿಮಗೆ ಸೇವೆಗಾಗಿ ಅವಕಾಶ ಚೆನ್ನಾಗಿ ಲಭಿಸಿದೆ. ಈಗ 100 ಸ್ಥಾನಗಳಲ್ಲಿ ಸೇವೆ ಉಳಿದಿದೆ ಆದ್ದರಿಂದ 600 ಜನ ಇಬ್ಬರಿಬ್ಬರು ಅಥವಾ ಮೂವರು ಸೇರಿ ಮಾಡಿದರೂ ಸೇವೆ ಪೂರ್ತಿಯಾಗಿ ಬಿಡುತ್ತದೆ. ನಿಮಗಾಗಿ ಸೇವೆಯ ಆಹ್ವಾನ ಮೊದಲೇ ತಯಾರಾಗಿ ಇದೆ. ಬಹಳ ಚೆನ್ನಾಗಿ ಉನ್ನತಿಯನ್ನು ಮಾಡಿದ್ದೀರಿ, ಎಂದರೆ ಸೇವೆ ಮಾಡಿದ್ದೀರಿ ಆದ್ದರಿಂದಲೇ ಬಂದಿದ್ದಾರಲ್ಲವೇ, ಆದ್ದರಿಂದ ಎಷ್ಟು ಶುಭಾಶಯಗಳು? ಪದಮಾ ಪದಂ ಶುಭಾಶಯಗಳು.

(ಬಾಪ್‌ದಾದಾ ಡ್ರಿಲ್ ಮಾಡಿಸಿದರು) ಒಂದು ಕ್ಷಣದಲ್ಲಿ ಎಷ್ಟು ಬಿಂದುಗಳನ್ನು ಇಡಬಲ್ಲಿರಿ? ಈಗೀಗಲೇ ಕರ್ಮದಲ್ಲಿ ಬರುವುದು ಮತ್ತು ಈಗೀಗಲೇ ಕರ್ಮದಿಂದ ಅತೀತವಾಗಿ, ಕರ್ಮ ಸಂಬಂಧದಿಂದ ಅತೀತವಾಗುತ್ತಿದ್ದೀರಾ? ಈ ವ್ಯಾಯಾಮ ಬರುತ್ತಿದೆಯೇ? ಯಾವ ಕರ್ಮವಾದರೂ, ಬಹಳ ಬ್ಯುಸಿಯಾಗಿದ್ದರೂ, ಮನಸ್ಸು, ಬುದ್ಧಿ, ಕರ್ಮದ ಸಂಬಂಧದಲ್ಲಿ ನಿಮಗ್ನವಾಗಿದ್ದರೂ ಬಂಧನದಲ್ಲಿ ಅಲ್ಲ ಆದರೆ ಸಂಬಂಧದಲ್ಲಿ ಇದ್ದರೂ ಬಿಂದುವನ್ನು ಇಡಿ ಎಂದು ತಂದೆಯ ಆಜ್ಞೆ ಲಭಿಸಿದಾಕ್ಷಣ ಇಡುತ್ತಿದ್ದೀರಾ ಅಥವಾ ಕರ್ಮದ ಯೋಚನೆ ನಡೆಯುತ್ತಿದೆಯೇ? ಇದು ಮಾಡಬೇಕು, ಇದನ್ನು ಮಾಡಬಾರದು, ಇದು ಹೀಗೆ, ಇದು ಹಾಗೆ ಎಂದು ಯೋಚಿಸುತ್ತಿದ್ದೀರಾ? ಈ ಅಭ್ಯಾಸ ಒಂದು ಕ್ಷಣಕ್ಕಾದರೂ ಮಾಡಿರಿ ಆದರೆ ಅಭ್ಯಾಸವನ್ನು ಮಾಡುತ್ತಾ ಇರಿ ಏಕೆಂದರೆ ಒಂದು ಕ್ಷಣದಲ್ಲಿ ಬಿಂದುವನ್ನು ಇಡುವುದರಲ್ಲಿ ಅಂತಿಮ ಸರ್ಟಿಫಿಕೇಟ್ ಲಭಿಸುತ್ತದೆ.  ಕ್ಷಣದಲ್ಲಿ ವಿಸ್ತಾರವನ್ನು ಸಮಾವೇಶಗೊಳಿಸಬೇಕು, ಸಾರ ರೂಪವಾಗಬೇಕು. ಈ ಅಭ್ಯಾಸ ಅವಕಾಶ ಸಿಕ್ಕಾಗಲೆಲ್ಲಾ ಮಾಡುತ್ತಾ ಇರಿ. ಯೋಗದಲ್ಲಿ ಕುಳಿತುಕೊಳ್ಳುವಾಗಲೇ ಬಿಂದುವನ್ನು ಇಡಬಲ್ಲೆವು ಎಂಬ ಹಾಗೆ ಇರಬಾರದು. ಏರುಪೇರಲ್ಲಿ ಕೂಡ ಬಿಂದುವು ಇಡಬೇಕು, ನಿಮ್ಮ ಬ್ರೇಕ್ ಇಷ್ಟು ಶಕ್ತಿಶಾಲಿಯಾಗಿ ಇದೆಯೇ? ಅಥವಾ ಇಲ್ಲಿ ಬ್ರೇಕ್ ಹಾಕಿದರೆ ಬೇರೆ ಎಲ್ಲೋ ಬೀಳುತ್ತಿದೆಯೇ?  ಬಿಂದು ಇಡಬೇಕಾದ ಸಮಯದಲ್ಲಿ ಬಿಂದುವನ್ನು ಇಡದೇ ಸಮಯವಾದ ನಂತರ ಬಿಂದುವನ್ನು ಇಟ್ಟರೆ, ಅದರಿಂದ ಲಾಭವಿರುವುದಿಲ್ಲ. ಯೋಚಿಸಿದಾಕ್ಷಣ ನಡೆಯಬೇಕು, ನಾನು ಶರೀರವಲ್ಲ ಆತ್ಮ ಎಂದು ಯೋಚಿಸುತ್ತಾ ಇರಬೇಡಿ. ನಾನು ಬಿಂದು ಇಡಬೇಕು, ಏನನ್ನೂ ಯೋಚಿಸಬಾರದು ಎಂದು ಹೀಗೆ ಯೋಚಿಸುತ್ತಾ ಇದ್ದರೂ ಸಮಯ ಹಿಡಿಸುತ್ತದೆ. ಇದನ್ನು ಕ್ಷಣದಲ್ಲಿ ಬಿಂದುವಿಡುವುದು ಎನ್ನಲಾಗುವುದಿಲ್ಲ. ಸ್ವಯಂ ಈ ಅಭ್ಯಾಸವನ್ನು ಮಾಡಿ. ಯಾರೂ ಮಾಡಿಸಬೇಕಾಗಿರುವ ಅವಶ್ಯಕತೆ ಇಲ್ಲ ಹೊಸಬರಾದರೂ ಹಳಬರಾದರೂ ಎಲ್ಲರಿಗೂ ಈ ವಿಧಿಯಂತೂ ತಿಳಿದಿದೆಯಲ್ಲವೇ. ಈ ಅಭ್ಯಾಸ ಬಹಳ ಸಮಯದಿಂದ ಇರಬೇಕು ಆ ಸಮಯದಲ್ಲಿ ನಾನು ಬಿಂದುವನ್ನು ಇಡಬಲ್ಲೆನು ಎಂದು ಕೊಂಡರೆ ಇಡಲಾಗುವುದಿಲ್ಲ. ಇದು ಮೊದಲಿನಿಂದಲೇ ಅರ್ಥ ಮಾಡಿಕೊಳ್ಳಬೇಕು. ಆ ಸಮಯದಲ್ಲಿ ಆ ಸಮಯದನುಸಾರ ಮಾಡುತ್ತೇನೆ ಎಂದರೆ ಮಾಡಲಾಗುವುದಿಲ್ಲ. ಅದು ಆಗುವುದಿಲ್ಲ, ಬಹಳ ಸಮಯದ ಅಭ್ಯಾಸವೇ ಉಪಯೋಗವಾಗುತ್ತದೆ. ಏಕೆಂದರೆ ಈ ಸಮಯಕ್ಕೆ ಆ ಸಮಯಕ್ಕೆ ಸಂಬಂಧವಿರುತ್ತದೆ. ಇಲ್ಲಿಯ ಬಹಳ ಸಮಯದ ಅಭ್ಯಾಸವೇ ಅಲ್ಲಿನ ಬಹಳ ಸಮಯದ ರಾಜ್ಯ ಭಾಗ್ಯವನ್ನು ಪಡೆಯುವಂತೆ ಮಾಡುತ್ತದೆ.  ಒಂದು ವೇಳೆ ಅಲ್ಪಕಾಲದ ಅಭ್ಯಾಸವಿದ್ದರೆ ಪ್ರಾಪ್ತಿ ಕೂಡ ಅಲ್ಪಕಾಲವಾಗಿಯೇ ಇರುತ್ತದೆ.  ಇಡೀ ದಿನದಲ್ಲಿ ಯಾವಾಗ ಅವಕಾಶ ಸಿಕ್ಕರೆ ಆಗ ಮಾಡುತ್ತಾ ಇರಿ. ಒಂದು ಕ್ಷಣದಿಂದ ಕೆಲಸವಂತೂ ಹಾಳಾಗುವುದಿಲ್ಲ. ಮತ್ತೆ ಆ ಕೆಲಸವನ್ನು ಮಾಡುವುದು ಪ್ರಾರಂಭಿಸಬಹುದು ಆದರೆ ಏರುಪೇರಿನಲ್ಲಿ ಬಿಂದುವನ್ನು ಇಡಲಾಗುತ್ತಿದೆಯೇ? ಇಲ್ಲವೇ ಎಂದು ಪರಿಶೀಲನೆ ಮಾಡಿಕೊಳ್ಳಿ. ಕರ್ಮ ಸಂಬಂಧದಲ್ಲಿ ಬರುವುದು ಮತ್ತು ಕರ್ಮಬಂಧನದಲ್ಲಿ ಬರುವುದರಲ್ಲಿ ಕೂಡ ಅಂತರವಿದೆ. ಒಂದು ವೇಳೆ ಕರ್ಮ ಬಂಧನದಲ್ಲಿ ಬಂದರೆ ಕರ್ಮ ನಿಮ್ಮನ್ನು ಆಕರ್ಷಿಸುತ್ತದೆ. ಬಿಂದುವನ್ನು ಇಡಲು ಬಿಡುವುದಿಲ್ಲ ಮತ್ತು ಅತೀತವಾಗಿ ಮತ್ತು ಪ್ರಿಯವಾಗಿ ಕರ್ಮ ಸಂಬಂಧದಲ್ಲಿ ಬಂದರೆ ಕ್ಷಣದಲ್ಲಿ ಬಿಂದುವನ್ನು ಇಡಬಲ್ಲಿರಿ ಏಕೆಂದರೆ ಅದರಲ್ಲಿ ಬಂಧನವಿರುವುದಿಲ್ಲ. ಬಂಧನ ಕೂಡ ಆಕರ್ಷಿಸುತ್ತದೆ ಮತ್ತು ಸಂಬಂಧ ಕೂಡ ಆಕರ್ಷಿಸುತ್ತದೆ ಆದರೆ ಅತೀತವಾಗಿ ಸಂಬಂಧದಲ್ಲಿ ಬರಬೇಕು. ಇದನ್ನು ಅಂಡರ್ ಲೈನ್ ಮಾಡಿಕೊಳ್ಳಬೇಕು ಈ

ಅಭ್ಯಾಸ ಇರುವವರೇ ಪಾಸ್ ವಿತ್ ಆನರ್ ಆಗುತ್ತಾರೆ. ಇದು ಕೊನೆಯ ಕರ್ಮಾತೀತ ಸ್ಥಿತಿ ಪೂರ್ತಿಯಾಗಿ ಅತೀತವಾಗಿ, ಅಧಿಕಾರಿಯಾಗಿ ಕರ್ಮದಲ್ಲಿ ಬರಬೇಕು. ಬಂಧನಕ್ಕೆ ವಶವಾಗಬಾರದು.

ಕರ್ಮ ಮಾಡುತ್ತಾ, ಮಾಡುತ್ತಾ ಕರ್ಮ ಬಂಧನದಲ್ಲಿ ಬರುತ್ತಿಲ್ಲ ತಾನೇ? ಅದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಬಹಳ ಅತೀತವಾಗಿ ಮತ್ತು ಪ್ರಿಯವಾಗಿ ಇರಬೇಕು. ಯಾವ ಅಭ್ಯಾಸ ಬೇಕಾಗಿದೆಯೋ ತಿಳಿಯಿತೇ? ಕಷ್ಟ ಅನಿಸುತ್ತಿಲ್ಲವಲ್ಲವೇ? ಸ್ವಲ್ಪ ಸ್ವಲ್ಪ ಕಷ್ಟವೆನಿಸುತ್ತಿದೆಯೇ? ಕರ್ಮೇಂದ್ರಿಯಗಳಿಗೆ ಯಜಮಾನಿಗಳಲ್ಲವೇ? ನಿಮ್ಮನ್ನು ನೀವು ರಾಜಯೋಗಿಗಳು ಎಂದುಕೊಳ್ಳುತ್ತಿದ್ದೀರಿ ಅಲ್ಲವೇ. ಯಾವುದಕ್ಕೆ ರಾಜರು? ಅಮೆರಿಕಾ, ಆಫ್ರಿಕಾಗೆ ರಾಜರಾ? ಕರ್ಮೇಂದ್ರಿಯಗಳಿಗೆ ರಾಜರಲ್ಲವೇ ಮತ್ತು ರಾಜನು ಬಂಧನದಲ್ಲಿ ಬಂದರೆ ರಾಜನಾಗಿ ಇರುತ್ತಾನೆಯೇ? ಎಲ್ಲರ ಬಿರುದು ಕೂಡ ಬಹಳ ಚೆನ್ನಾಗಿದೆ. ಎಲ್ಲರೂ ರಾಜಯೋಗಿಗಳೇ, ರಾಜಯೋಗಿಗಳೇನಾ ಅಥವಾ ಪ್ರಜೋಗಿಗಳಾ? ಆಗಾಗ ರಾಜಯೋಗಿಗಳು ಆಗಾಗ ಪ್ರಜಾ ಯೋಗಿಗಳಾ? ಒಳ್ಳೆಯದು. ಕಷ್ಟ ಎಂಬ ಮಾತು ನಿಮ್ಮ ಡಿಕ್ಷನರಿಯಿಂದ ತೆಗೆದು ಹಾಕಿದ್ದೀರಿ. ಈ ಬ್ರಾಹ್ಮಣ ಜೀವನ ಕೂಡ ಒಂದು ಡಿಕ್ಷನರಿ ಬ್ರಾಹ್ಮಣ ಜೀವನದ ಡಿಕ್ಷನರಿಯಲ್ಲಿ ಕಷ್ಟ ಎಂಬ ಮಾತೇ ಇಲ್ಲ. ಆಗಾಗ ಹಾರುತ್ತ ಬಂದುಬಿಡುತ್ತಿದೆಯಾ?

ಎಷ್ಟು ವರದಾನಗಳು ಲಭಿಸುತ್ತಿವೆ. ಇಲ್ಲಿಯವರೆಗೆ ಎಷ್ಟು ವರದಾನಗಳು ಲಭಿಸುವೆಯೋ ಅವುಗಳ ಲಿಸ್ಟನ್ನು ತೆಗೆಯಿರಿ ಬಹಳ ಲಭಿಸಿವೆಯಲ್ಲವೇ, ದಿನವೂ ವರದಾನಗಳು ಲಭಿಸುತ್ತಿವೆ. ಭಕ್ತಿ ಮಾರ್ಗದಲ್ಲಿ ಭಕ್ತರು ಒಂದು ವರದಾನ ಲಭಿಸಿದರೂ ಅವರು ಹೇಗಿರುವವರು ಹೇಗಾಗುತ್ತಾರೆ! ಮತ್ತೆ ನಿಮಗೆ ದಿನವೂ ಭಗವಂತನು ವರದಾನವನ್ನು ಕೊಡುತ್ತಿದ್ದಾರೆ ಅರ್ಥಾತ್ ಎಷ್ಟು ಅದೃಷ್ಟವಂತರು! ಪಾಲನೆ ಕೂಡ ವರದಾನಗಳಿಂದಲೇ ಆಗುತ್ತದೆ. ವರದಾನ ನೆನಪಿರುತ್ತದೆಯೇ ಅಥವಾ ಕೇಳಿರುವ ಸಮಯ ಮಾತ್ರ ನೆನಪಿರುತ್ತದೆಯೇ 1.ನೆನಪು ಇರುವುದು 2.ವರದಾನವನ್ನು ಕಾರ್ಯದಲ್ಲಿ ಉಪಯೋಗಿಸುವುದು. ವರದಾನ ಎಂತಹದೆಂದರೆ ಎಂತಹ ಪರಿಸ್ಥಿತಿಯಾದರು ವರದಾನದ ಶಕ್ತಿ ಪರಿಸ್ಥಿತಿಯನ್ನು ಅಗ್ನಿಯಿಂದ ನೀರಿನಂತೆ ಮಾಡಿಬಿಡುತ್ತದೆ. ಅಷ್ಟು ಶೀತಲವಾಗಿ ಮಾಡಿಬಿಡುತ್ತದೆ. ಕೇವಲ ಉಪಯೋಗಿಸುವ ವಿಧಿ ಬರಬೇಕು ಮತ್ತು ಎರಡನೇ ವಿಷಯ ಸಮಯಕ್ಕೆ ಕಾರ್ಯದಲ್ಲಿ ಉಪಯೋಗಿಸಿರಿ. ಅರ್ಧ ಸಮಯ ಮುಗಿದ ನಂತರ ಅರಿವಿನಲ್ಲಿ ಬರುವಂತೆ ಇರಬಾರದು. ವರದಾನವನ್ನು ಉಪಯೋಗಿಸುವುದು ಬರುತ್ತದೆಯೇ? ಉಪಯೋಗಿಸುತ್ತಿದ್ದೀರಾ? ಅಥವಾ ಕೇಳಿ ಸಂತೋಷ ಪಡುತ್ತಿದ್ದೀರಾ? ಡೈರಿಯಲ್ಲಂತೂ ಬಹಳ ವರದಾನಗಳು ತುಂಬಿಹೋಗಿವೆ. ಪುಸ್ತಕ ಕೂಡ ತಯಾರಾಗಿಬಿಟ್ಟಿದೆ. ಪುಸ್ತಕ ಬಿರುವಾದಲ್ಲಂತೂ ಇಟ್ಟು ಬಿಟ್ಟಿದ್ದೀರಿ. ಆದರೆ ಕಾರ್ಯದಲ್ಲಿ ಉಪಯೋಗಿಸಿರಿ ಮತ್ತು ಎಷ್ಟು ಕಾರ್ಯದಲ್ಲಿ ಉಪಯೋಗಿಸುತ್ತಾ ಇರುತ್ತೀರೋ ಅಷ್ಟು ವರದಾನಗಳು ಇನ್ನು ಹೆಚ್ಚಾಗುತ್ತಾ ಇರುತ್ತವೆ ಮತ್ತು ವರದಾನದ ವಿಶಾಲ ರೂಪ ಇನ್ನೂ ಅನುಭವದಲ್ಲಿ ಬರುತ್ತದೆ. ಒಳ್ಳೆಯದು.

**ನಾಲ್ಕೂ ಕಡೆಯ ಧರ್ಮ ಶಕ್ತಿಯ ಅಧಿಕಾರಿ ಆತ್ಮರು, ಸದಾ ಸ್ವರಾಜ್ಯ ಶಕ್ತಿಯ ಅಧಿಕಾರಿ ಆತ್ಮರು, ಸದಾ ಡಬಲ್ ಶಕ್ತಿಯುಳ್ಳ ಡಬಲ್ ಕಿರೀಟವುಳ್ಳ ಶ್ರೇಷ್ಠ ಆತ್ಮರು, ಸದಾ ಸರ್ವಶಕ್ತಿಗಳ ಮೂಲಕ ಶಕ್ತಿ ಸ್ವರೂಪದ ಪ್ರತ್ಯಕ್ಷ ಸ್ವರೂಪವನ್ನು ತೋರಿಸುವಂತಹ ಶಕ್ತಿಶಾಲಿ ಆತ್ಮರು, ಸದಾ ಲಕ್ಷ್ಯವನ್ನು ಲಕ್ಷಣದ ರೂಪದಲ್ಲಿ ತೋರಿಸುವಂತಹ, ಅನುಭವ**

**ಮಾಡಿಸುವಂತಹ ಶಕ್ತಿಶಾಲಿ ಮಹಾವೀರರು, ಅಚಲ-ಅಡೋಲ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 07-03-1995.

***ಬ್ರಾಹ್ಮಣರು ಅರ್ಥಾತ್ ಧರ್ಮಶಕ್ತಿ ಹಾಗೂ ಸ್ವರಾಜ್ಯ ಶಕ್ತಿಯ ಅಧಿಕಾರಿ ಆತ್ಮರು.***

ಧರ್ಮಶಕ್ತಿ ಎಂದರೆ ಸತ್ಯತೆ & ಪವಿತ್ರತೆಯ ಧಾರಣಾ ಸ್ವರೂಪ ಹಾಗೂ ಸ್ವರಾಜ್ಯ ಶಕ್ತಿ ಎಂದರೆ ಅಧಿಕಾರಿಯಾಗಿ ಸರ್ವಕರ್ಮೇಂದ್ರಿಯಗಳನ್ನು ತನ್ನ ಆದೇಶದಂತೆ ನಡೆಸುವುದು. ಯಾವುದೇ ಪರಿಸ್ಥಿತಿ ಆಗಿರಲಿ ಪ್ರಕೃತಿ ಅಥವಾ ಮಾಯೆಯ ಸರ್ವ ಸ್ವರೂಪಗಳಲ್ಲಿ ಸ್ವರಾಜ್ಯಾಧಿಕಾರಿ ಅಥವಾ ಸ್ವರಾಜ್ಯ ಶಕ್ತಿಯುಳ್ಳವರು ಅಧೀನರಾಗುವುದಿಲ್ಲ ಅಧಿಕಾರಿಯಾಗಿ ಇರುತ್ತಾರೆ. ಎಂದು ಹೇಳುತ್ತಾ ಶಿವ ಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಧರ್ಮಶಕ್ತಿ ಮತ್ತು ಸ್ವರಾಜ್ಯ ಶಕ್ತಿಯ ಧಾರಣಾ ಸ್ವರೂಪ.

2. ನಾನು ಸತ್ಯತೆ ಮತ್ತು ಪವಿತ್ರತೆಯನ್ನು ಧಾರಣೆ ಮಾಡಿರುವ ಧರ್ಮ ಶಕ್ತಿ ಸ್ವರೂಪ.

3. ನಾನು ಅಧಿಕಾರಿಯಾಗಿ ಸರ್ವಕರ್ಮೇಂದ್ರಿಯಗಳನ್ನು ನನ್ನ ಅಧಿಕಾರ ಮತ್ತು ಆದೇಶದನುಸಾರ ನಡೆಸುವ ಸ್ವರಾಜ್ಯ ಶಕ್ತಿ ಸ್ವರೂಪ.

4. ನಾನು ಇಲ್ಲಿ ಧರ್ಮಶಕ್ತಿ ಮತ್ತು ಸ್ವರಾಜ್ಯ ಶಕ್ತಿಯನ್ನು ಪೂರ್ಣವಾಗಿ ಧಾರಣೆ ಮಾಡಿ ಭವಿಷ್ಯದಲ್ಲಿ ಧರ್ಮಶಕ್ತಿ ಮತ್ತು ರಾಜ್ಯಶಕ್ತಿಯ ಅಧಿಕಾರಿಯಾಗಿದ್ದೇನೆ. (ಕರ್ಮ ಫಿಲಾಸಫಿ).

5. ಬ್ರಾಹ್ಮಣತ್ಮನಾದ ನಾನು ರಾಜ್ಯಶಕ್ತಿ ಮತ್ತು ಧರ್ಮ ಶಕ್ತಿಯ ಅಧಿಕಾರಿ ಎಂಬ ಸ್ಮೃತಿಯ ನಿಶ್ಚಯದಿಂದ ಸದಾ ನಶೆಯಲ್ಲಿ ಇದ್ದೇನೆ.

6. ನಾನು ಎಂತಹ ಪರಿಸ್ಥಿತಿಗಳು ಬಂದರೂ ಒಂದು ಆಟದಂತೆ ಮನೋರಂಜನೆಯಂತೆ ನೋಡುತ್ತಾ ನಾನು ಅಪ್ಸೆಟ್ ಆಗದೆ ಮಾಯೆಯನ್ನು ಅಪ್ಸೆಟ್ ಮಾಡಿದ್ದೇನೆ.

7. ನಾನು ಯಾವುದೇ ಪರಿಸ್ಥಿತಿ ಅಥವಾ ಪ್ರಕೃತಿ ಏರುಪೇರಿನ ರೂಪದಲ್ಲಿ ಬಂದಾಗ ನಾಟ್(ಮಾಡಬಾರದು) ಮತ್ತು ಡಾಟ್ ಅರ್ಥಾತ್ ಬಿಂದುವನ್ನು ಇಟ್ಟಿದ್ದೇನೆ.

8. ನಾನು ಜ್ಞಾನ ಸಾಗರ ನೊಂದಿಗೆ ಶಕ್ತಿಶಾಲಿ ಕೂಡ ಆಗಿದ್ದೇನೆ.

9. ನಾನು ಇತರರ ಯೋಚನೆಯನ್ನು ಕೂಡ ನನ್ನ ಯೋಚನೆಯಂತೆಯೇ ನೋಡಿ, ಬೆರೆಸಿಕೊಂಡು, ಅರ್ಥ ಮಾಡಿಕೊಂಡು ಅವರ ಯೋಚನೆಗಳಿಗೆ ಕೂಡ ಗೌರವವನ್ನು ಕೊಟ್ಟಿದ್ದೇನೆ.

10. ನಾನು ವಿಶ್ವಾತ್ಮರಿಗೆ ಸಂದೇಶವನ್ನು ಕೊಟ್ಟು ಸೇವೆಯ ಸಂಪೂರ್ಣ ಸಫಲತೆಯನ್ನು ಪಡೆದಿದ್ದೇನೆ.

11. ನಾನು ಬಾಪ್‌ದಾದಾರವರಿಂದ ಸೇವಾಧಾರಿ ಮತ್ತು ಶಕ್ತಿ ಸ್ವರೂಪದ ಸರ್ಟಿಫಿಕೇಟ್ ಅನ್ನು ಕೂಡ ಪಡೆದಿದ್ದೇನೆ.

12. ನಾನು ವಿಸ್ತಾರವನ್ನು ಸಮಾವೇಶಗೊಳಿಸಿ, ಸಾರಸ್ವರೂಪವಾಗಿಸಿ ಕ್ಷಣದಲ್ಲಿ ಬಿಂದುವನ್ನು ಇಟ್ಟು ಅಂತಿಮ ಸರ್ಟಿಫಿಕೇಟ್ ಕೂಡ ತೆಗೆದುಕೊಂಡಿದ್ದೇನೆ.

13. ನಾನು ಬಹಳ ಸಮಯದಿಂದ ಬಿಂದುವನ್ನು ಇಡುವ ಅಭ್ಯಾಸ ಮಾಡಿ ಸಮಯಾನಸಾರ ಬಿಂದು ಇಡುತ್ತಿದ್ದೇನೆ.

14. ನಾನು ಪೂರ್ತಿಯಾಗಿ ಅತೀತವಾಗಿ, ಅಧಿಕಾರಿಯಾಗಿ ಕರ್ಮ ಸಂಬಂಧದಲ್ಲಿ ಬಂದು ಕೊನೆಯ ಕರ್ಮಾತೀತ ಸ್ಥಿತಿಗೆ ತಲುಪಿದ್ದೇನೆ.

15. ನಾನು ವರದಾನವನ್ನು ಸದಾ ನೆನಪಿಟ್ಟುಕೊಂಡು ಸಮಯದನುಸಾರ ಕಾರ್ಯದಲ್ಲಿ ಉಪಯೋಗಿಸಿ ಎಂತಹ ಪರಿಸ್ಥಿತಿಯನ್ನಾದರು ಅಗ್ನಿಯಿಂದ ನೀರಿನಂತೆ ಮಾಡಿದ್ದೇನೆ.

16. ನಾನು ವರದಾನಗಳನ್ನು ಕಾರ್ಯದಲ್ಲಿ ಉಪಯೋಗಿಸುತ್ತಾ ಮತ್ತಷ್ಟು ವರದಾನಗಳನ್ನು ಹೆಚ್ಚಿಸಿಕೊಂಡು ವರದಾನಗಳ ವಿಶಾಲರೂಪವನ್ನು ಅನುಭವ ಮಾಡಿಕೊಂಡಿದ್ದೇನೆ.